Email – aeepwdmadhugiri@gmail.com
Phone No : 08137-283336
Fax No________

ಕರ್ನಾಟಕ ಸರ್ಕಾರ

ಸಹಾಯಕ ಕಾರ್ಯಪಾಲಕ ಇಂಜಿನಿಯರ್.ರವರ ಕಛೇರಿ
ಲೋಕೋಪಯೋಗಿ ಇಲಾಖೆ ಉಪ ವಿಭಾಗ
ಮಧುಗಿರಿ

(ಲೋಕೋಪಯೋಗಿ ಇಲಾಖೆ ಉಪ ವಿಭಾಗ ಮಧುಗಿರಿ)

ಸಂ: ಸ.ಕಾ.ಇಂ/ಲೋ.ಇ..ಉ.ವಿ/ ಮಧುಗಿರಿ/ಸ.ಇಂ–2/ 611 /2024–25 ದಿನಾಂಕ : 12/02/20

ರವರಿಗೆ,

ಪ್ರಾಂಶುಪಾಲರು,
ಶ್ರೀ ರಾಘವೇಂದ್ರ ಇಂಟರ್ ನ್ಯಾಷನಲ್ ಶಾಲೆ
ಶ್ರೀ ರಾಘವೇಂದ್ರ ಚಾರಿಟಬಲ್ ಟ್ರಸ್ಟ್
ಮಧುಗಿರಿ

ಮಾನ್ಯರೆ,

ವಿಷಯ : ಶ್ರೀ ರಾಘವೇಂದ್ರ ಇಂಟರ್ ನ್ಯಾಷನಲ್ ಶಾಲೆ ಕಟ್ಟಡದ ಸುಸ್ಥಿತಿಯ ಬಗ್ಗೆ ದೃಢೀಕರಣ ಪತ್ರ ನೀಡುವ ಬಗ್ಗೆ.

ಉಲ್ಲೇಖ :1. ಪ್ರಾಂಶುಪಾಲರು ಶ್ರೀ ರಾಘವೇಂದ್ರ ಇಂಟರ್ ನ್ಯಾಷನಲ್ ಶಾಲೆ ಹರಿಹರರೂಪ ಕ್ರಾಸ್ ಮಧುಗಿರಿ ತಾ॥ ರವರ ಪತ್ರದ ದಿನಾಂಕ : 30–01–2025
2.ಕರ್ನಾಟಕ ಸರ್ಕಾರ ಪತ್ರ ಸಂಖ್ಯೆ: ಲೋಇ 59 ಬಿಇಡಿ 2019 ದಿನಾಂಕ:25–09–2024

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರ (1)ರನ್ವಯ ಶ್ರೀ ರಾಘವೇಂದ್ರ ಪ್ರಥಮದರ್ಜೆ ಕಾಲೇಜು ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖದನ್ವಯ ಕೋರಿದ್ದು ದಿನಾಂಕ:15–02–2025 ರಂದು ಸದರಿ ಕಟ್ಟಡವನ್ನು ಪರಿಶೀಲಿಸಲಾಗಿರುತ್ತದೆ.

ಅದರಂತೆ ಈ ಕಟ್ಟಡವನ್ನು 2017 ರಲ್ಲಿ ನಿರ್ಮಾಣಗೊಂಡಿರುತ್ತದೆ ಈ ಕಟ್ಟಡವು ನೆಲ ಹಾಗೂ ಒಂದು ಅಂತಸ್ತುಗಳನ್ನು ಹೊಂದಿದ್ದು, ಕಟ್ಟಡವು **40.00** ಮೀ ಉದ್ದ 16.50 ಮೀ ಅಗಲ ವಿಸ್ತೀರ್ಣವಿರುತ್ತದೆ. ಕಟ್ಟಡವು ಆರ್.ಸಿ.ಸಿ ಕಂಬಗಳು ಹಾಗೂ ಆರ್.ಸಿ.ಸಿ ತೊಲೆಗಳಿಂದ ಕೂಡಿರುತ್ತದೆ.ನೆಲಮಹಡಿಯಲ್ಲಿ 9 ಬೋದನಾ ಕೊಠಡಿಗಳು ಇರುತ್ತವೆ ಹಾಗೂ ಆಟೋಟದ ಸಾಮಾಗ್ರಿಗಳ ಕೊಠಡಿಯಿದ್ದು, ಶಾಲಾ ಗಂಡು ಮಕ್ಕಳಿಗೆ ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಶೌಛಾಲಯವಿರುತ್ತದೆ. ಗಂಡು ಮಕ್ಕಳಿಗೆ ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಶೌಛಾಲಯವಿರುತ್ತದೆ. ಎರಡನೇ ಮಹಡಿಯಲ್ಲಿ ವಿಜ್ಞಾನ ಪ್ರಯೋಗಾಲಯ ಗ್ರಂಥಾಲಯ ಹಾಗೂ 8 ಸಂಖ್ಯೆ ಭೋದನಾ ಕೊಠಡಿಗಳಿರುತ್ತವೆ. ಕಟ್ಟಡದ ಒಳಭಾಗದಲ್ಲಿ ಎರಡು ಕಡೆ ಮಟ್ಟಿಲುಗಳನ್ನು ಅಳವಡಿಸಿರುತ್ತಾರೆ ಕಟ್ಟಡದ ಎಲ್ಲಾ ಮಹಡಿಯಲ್ಲಿಯೂ ಅಗ್ನಿಶಾಮಕ ಉಪಕರಣಗಳನ್ನು ಅಳವಡಸಿರುತ್ತಾರೆ.

ಮುಂದುವರೆದು ಸದರಿ ಕಟ್ಟಡದ ಸ್ಥಿರತೆಯ ಬಗ್ಗೆ ಸಿವಿಲ್ ಇಂಜಿನಿಯರಿಂಗ್ ವಿಭಾಗ ಬೆಂಗಳೂರು ವಿಶ್ವ ವಿಧ್ಯಾಲಯ (UVCE) ರವರು ನೀಡಿರುವ ಪತ್ರವನ್ನು ಆದರಿಸಿ The Building is safe for Occupancy as Per National Building Code of India 2016 ರಂತೆ ಸದರಿ ಶಾಲಾ ಕಟ್ಟಡವು ವಾಸಯೋಗ್ಯ ಇರುತ್ತದೆಂಬ ಅಂಶವನ್ನು ತಿಳಿಸಲಾಗಿದೆ. ಸದರಿ ಕಟ್ಟಡದ ಗೋಡೆಗಳಲ್ಲಿ ಚಿಕ್ಕ ಬಿರುಕುಗಳು ಹೊಂದಿದ್ದು, ಕ್ರಾಕ್ ಸೀಲೆಂಟ್ ನಿಂದ ಅವುಗಳನ್ನು ಮುಚ್ಚಿ ಸರಿಪಡಿಸಿಕೊಳ್ಳಲು ಮತ್ತು ಕಟ್ಟಡವನ್ನು ಕಾಲಕಾಲಕ್ಕೆ ದುರಸ್ಥಿಗೊಳಿಸಿ ಕಟ್ಟಡದ ಗುಣಮಟ್ಟ ಕಾಪಡಿಕೊಳ್ಳಲು ಸೂಚಿಸಲಾಗಿದೆ. ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸಿಕೊಂಡನಂತರ ಶಾಲೆ ನೆಡೆಸಲು ಕಟ್ಟಡವು ಸುರಕ್ಷತವಾಗಿರುವ ಬಗ್ಗೆ ವರದಿ ನೀಡಿರುವ ಮೇರೆಗೆ ಕಾಲಕಾಲಕ್ಕೆ ಅವಶ್ಯಕವಾದ ನಿರ್ವಹಣೆ ದುರಸ್ಥಿ ಕ್ರಮಗಳನ್ನು ನಿರ್ವಹಿಸುವ ಷರತ್ತುಗಳೊಂದಿಗೆ ಕಟ್ಟಡ ಸಾಮರ್ಥ್ಯಕ್ಕೆ ಅನುಸಾರವಾಗಿ ಉಲ್ಲೇಖ ಪತ್ರ (2)ರನ್ವಯ ಮು ದಿನ 5 ವರ್ಷಗಳಿಗೆ ಸುರಕ್ಷತ ಪ್ರಮಾಣ ಪತ್ರವನ್ನು ನೀಡಲಾಗಿದೆ.

(5) B.S.C

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ಉಪ ವಿಭಾಗ
ಮಧುಗಿರಿ